ಪುಟ್ಟ ಮಕ್ಕಳಿಗೆಂದು ಕಾಮಿಕ್ಸ್ ಪುಸ್ತಕಗಳನ್ನೂ ಇಡಲಾಗಿದೆ. ಚಿತ್ರಗಳ ಮೂಲಕ ಮಕ್ಕಳನ್ನು ಓದಲು ಪ್ರೇರೇಪಿಸುವ ಪ್ರಯತ್ನ ಸಾಗಿದೆ. ಅವರವರ ಆಸಕ್ತಿ, ಅಭಿರುಚಿಗೆ ತಕ್ಕಂತೆ ಪುಸ್ತಕಗಳನ್ನು ಆರಿಸಿಕೊಂಡು ಓದುತ್ತಾರೆ. ಕೀರ್ತನೆಗಳನ್ನು ಕೇಳಲೆಂದು ಇಲ್ಲಿಯೇ ಲ್ಯಾಪ್‌ಟಾಪ್ ವ್ಯವಸ್ಥೆ ಮಾಡಲಾಗಿದ್ದು, ಸಂಗೀತ ಅಭ್ಯಾಸ ಮಾಡುವವರಿಗೆ ಅನುಕೂಲವಾಗಿದೆ.



ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ

### ಸವಾಲುಗಳ ನಡುವೆ ಓದುವ ಉತ್ಸಾಹ

‘ಈಗ ಯುವ ಸಮುದಾಯಕ್ಕೆ ಹೆಚ್ಚು ಸವಾಲುಗಳಿವೆ. ಶಿಕ್ಷಣ, ಉದ್ಯೋಗ, ಪ್ರತಿ ವಿಷಯದಲ್ಲಿಯೂ ಅವರದ್ದೇ ಜವಾಬ್ದಾರಿಗಳಿವೆ. ಮೊಬೈಲ್, ಸಾಮಾಜಿಕ ಜಾಲತಾಣಗಳೆಂಬ ಆಯ್ಕೆಗಳು ಹೆಚ್ಚಾಗಿವೆ. ಹೀಗಿದ್ದಾಗ ಅವರಲ್ಲಿ ಸಾಹಿತ್ಯ, ಕಲೆ, ತತ್ವಪದ, ವಚನ, ಕೀರ್ತನೆಗಳ ಬಗ್ಗೆ ವಿಶೇಷ ಒಲವು ಮೂಡಿಸುವುದು ಹೇಗೆ? ಈ ಸವಾಲಿಗೆ ಉತ್ತರ, ಅವರಿಗೆ ಬೇಕಾದ ರೀತಿಯಲ್ಲಿಯೇ ಕಾರ್ಯಕ್ರಮಗಳನ್ನು ರೂಪಿಸುವುದು. ಇದೇ ಬಹು ಮುಖ್ಯ ಸಾಧನ’ ಎನ್ನುವುದು ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ಅವರ ಅಭಿಪ್ರಾಯ.

‘ಯುವಸಮುದಾಯಕ್ಕೆ ಓದಿನಲ್ಲಿ ಅಥವಾ ಸಾಹಿತ್ಯದಲ್ಲಿ ಆಸಕ್ತಿಯಿಲ್ಲ ಎಂದು ಹಿರಿಯರು ಹೇಳುವುದನ್ನು ನಾವು ಕೇಳುತ್ತಿರುತ್ತೇವೆ. ಆದರೆ ಅವರಲ್ಲಿ ಆಸಕ್ತಿ ಕುದುರಿಸಲು ಹೇಗೆ ಕಾರ್ಯಕ್ರಮ ರೂಪಿಸುತ್ತಿದ್ದೇವೆ ಎಂಬುದನ್ನು ಯೋಚಿಸಬೇಕು’ ಎನ್ನುತ್ತಾರೆ ಅವರು. ಯುವಜನರಲ್ಲಿ ಆಸಕ್ತಿ ಚಿಗುರಿಸುವ ಉದ್ದೇಶದೊಂದಿಗೆ ಕ್ರಿಯಾಶೀಲ ಕಾರ್ಯಕ್ರಮಗಳನ್ನು ರೂಪಿಸುತ್ತಿರುವುದಾಗಿ ತಿಳಿಸುತ್ತಾರೆ.



ಕಾ.ತ. ಚಿಕ್ಕಣ್ಣ

‘ಶಾಲಾ ಕಾಲೇಜು ಮಕ್ಕಳು ಕನಕ ಕೇಂದ್ರಿತ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವುದಲ್ಲದೆ ಸಂವಾದವನ್ನೂ ನಡೆಸುತ್ತಾರೆ. ಅವರು ಆಸಕ್ತಿಯಿಂದ ತೊಡಗಿಕೊಳ್ಳುತ್ತಿರುವುದು ಉತ್ತಮ ಬೆಳವಣಿಗೆ. ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟು ಅವರನ್ನು ಓದಿನತ್ತ ಹಾಗೂ ಕ್ರಿಯಾಶೀಲ ಕಾರ್ಯಕ್ರಮಗಳತ್ತ ಆಕರ್ಷಿಸುತ್ತಿದ್ದೇವೆ. ಕನ್ನಡ ಸಾಹಿತ್ಯ ವಿದ್ಯಾರ್ಥಿಗಳೊಂದಿಗೆ ವಿಜ್ಞಾನ, ವಾಣಿಜ್ಯ ವಿದ್ಯಾರ್ಥಿಗಳೂ ಕನಕರ ಜೀವನವನ್ನು ಅಧ್ಯಯನ ಮಾಡಲು ಮುಂದೆ ಬರುತ್ತಿದ್ದಾರೆ. ನೂರು ವಿದ್ಯಾರ್ಥಿಗಳಲ್ಲಿ ಐವರಿಗಾದರೂ ಕನಕರ ವಿಚಾರಧಾರೆಗಳು ಹತ್ತಿರವಾದರೆ ನಮ್ಮ ಉದ್ದೇಶ ಸಾರ್ಥಕ’ ಎಂದು ಆಶಾವಾದ ವ್ಯಕ್ತಪಡಿಸುತ್ತಾರೆ ಅವರು.





### ಕನಕ ಸಂಸ್ಕೃತಿ ಪಸರಿಸುತ್ತಾ...

ಶಾಲಾ ಕಾಲೇಜು ಮಕ್ಕಳಲ್ಲಿ ಓದುವ ಸಂಸ್ಕೃತಿ ರೂಪುಗೊಂಡರೆ ಉತ್ತಮ ಭವಿಷ್ಯಕ್ಕೆ ಮುನ್ನುಡಿ ಎಂಬ ಕಾರಣದಿಂದ ಕನಕ ಕೇಂದ್ರಿತ ಕಾರ್ಯಕ್ರಮಗಳನ್ನು ಕೇಂದ್ರದ ವತಿಯಿಂದ ಪ್ರತಿ ವರ್ಷವೂ ಆಯೋಜಿಸಲಾಗುತ್ತಿದೆ.

‘ಕನಕ ಸಂಸ್ಕೃತಿ ಕಮ್ಮಟ ಮತ್ತು ರಸಗ್ರಹಣ ಶಿಬಿರ’, ‘ಕನಕ ಓದು’, ‘ಮುತ್ತು ಬಂದಿದೆ ಕೇರಿಗೆ’ ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಕಿಶೋರ ಪ್ರತಿಭೆಗಳಿಗೆ ಗಮಕ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ. ‘ಕನಕ ಕಾವ್ಯ ಗಮಕ ವ್ಯಾಖ್ಯಾನ ಶಿಬಿರ’, ‘ಕನಕ ಮನೆ ಮನೆ ತನಕ’ ಕನಕದಾಸರ ಕಾವ್ಯಕೃತಿಗಳ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಕನಕರ ಬದುಕು, ಅವರ ಸಾಹಿತ್ಯಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳನ್ನು ಮನನ ಮಾಡುವ ವಿಚಾರ ಸಂಕಿರಣಗಳು, ರಸಪ್ರಶ್ನೆ ಕಾರ್ಯಕ್ರಮಗಳು, ಕನಕ ನಡೆ ನುಡಿ ಉತ್ಸವ– ಚಿಂತನಾ ಗೋಷ್ಠಿಗಳು, ಸಂವಾದ ಗೋಷ್ಠಿಗಳು, ಕನಕ ಚಿತ್ರಕಲಾ ಶಿಬಿರ, ಕನಕ ಸಾಹಿತ್ಯ ಲೋಕ ಪ್ರಬಂಧ ಸ್ಪರ್ಧೆಗಳನ್ನು ಹಲವು ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಭಿನ್ನ ಜಾನಪದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಕನಕ ಸಂಸ್ಕೃತಿ ಸಂಚಲನ ಕಾರ್ಯಕ್ರಮವನ್ನು ದೊಡ್ಡ ಉತ್ಸವದ ರೀತಿ ನಡೆಸಿಕೊಡಲಾಗುತ್ತದೆ.

ವಿಚಾರ ಸಂಕಿರಣ, ರಸಪ್ರಶ್ನೆ ಆಯೋಜನೆಗೂ ಮುನ್ನ ಶಾಲಾ ಕಾಲೇಜು ಮಕ್ಕಳಿಗೆ ಕನಕರ ಬಗ್ಗೆ ತಿಳಿದುಕೊಳ್ಳಲು ಹತ್ತು ದಿನ ಮುಂಚೆಯೇ ಪುಸ್ತಕಗಳನ್ನು ಓದಲು ಕೊಡಲಾಗುತ್ತದೆ. ಅದರ ಮೇಲೆ ಕಾರ್ಯಕ್ರಮ ನಡೆಸಲಾಗುತ್ತದೆ. ಅಂತರ ಕಾಲೇಜು ಸ್ಪರ್ಧೆಗಳನ್ನೂ ನಡೆಸಲಾಗುತ್ತದೆ. ಮೂರು ಜನರಿಗೆ ಪುಸ್ತಕಗಳನ್ನು ಬಹುಮಾನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಜಿಲ್ಲಾವಾರು ತತ್ವಪದಕಾರರು, ಸಾಂಸ್ಕೃತಿಕ ಪ್ರತಿನಿಧಿಗಳಿಂದ ಉತ್ತಮ ತಂಡಕ್ಕೆ ಆಹ್ವಾನ ಕೊಟ್ಟು ಸಾರ್ವಜನಿಕ ಕಾರ್ಯಕ್ರಮ ನಡೆಸಲಾಗುತ್ತದೆ.

‘ಕನಕ ಕಾವ್ಯ ದೀವಿಗೆ’ ಕಾರ್ಯಕ್ರಮ ಇತ್ತೀಚಿನ ಸೇರ್ಪಡೆ. ಭಕ್ತಿ ಸಾಹಿತ್ಯ, ತತ್ವಪದ, ಕೀರ್ತನೆಯಲ್ಲಿ ತೌಲನಿಕವಾಗಿ ವಿಷಯಗಳನ್ನು ಆರಿಸಿಕೊಂಡು ವಿಚಾರ ಸಂಕಿರಣಗಳನ್ನು ನಡೆಸಲಾಗುತ್ತದೆ.

ಸದ್ಯ ಕೇಂದ್ರದ ಆವರಣದಲ್ಲಿ ಕನಕದಾಸರ ಜೀವನ ದಾರಿಯನ್ನು ಬಿಂಬಿಸುವ ಕಲಾಕೃತಿಗಳ ಸ್ಥಾಪನೆಗೆ ಯೋಜನೆಯನ್ನು ರೂಪಿಸಲಾಗುತ್ತಿದೆ.

ವಿದ್ಯಾರ್ಥಿಗಳು, ವಿದ್ವಾಂಸರು ಹಾಗೂ ಸಾರ್ವಜನಿಕರು– ಈ ಮೂರು ವರ್ಗಗಳನ್ನು ತಲುಪಬೇಕೆಂಬುದು ಅಧ್ಯಯನ ಕೇಂದ್ರದ ಆಶಯ. ಇದೇ ಆಶಯದಲ್ಲಿ ಭಿನ್ನವಾಗಿ, ರಚನಾತ್ಮಕವಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮಗಳಿಗೆ ಉತ್ತಮ ಸ್ಪಂದನೆಯೂ ದೊರೆತಿರುವುದು ಕೇಂದ್ರಕ್ಕೆ ಬಲ ನೀಡಿದೆ, ಇನ್ನಷ್ಟು ಕ್ರಿಯಾಶೀಲವಾಗಿ ಕಾರ್ಯಕ್ರಮ ರೂಪಿಸುವ ಹುಮ್ಮಸ್ಸನ್ನೂ ತುಂಬಿದೆ. ■

ಕಳೆದ ವಾರದ ‘ಚೆನ್ನುಡಿ’
‘ಮುಳುಗಡೆ ಊರಂದ್ರ...’ ಕೇಳಿ...
ಮಲ್ಲಿಕಾರ್ಜುನ ಶೆಲ್ಲಿಕೇರಿ
ಅವರ ಧ್ವನಿಯಲ್ಲಿ
ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.